ಶ್ರೀ ಎಂ. ವೀರಪ್ಪ ಮೊಯಿಲಿ — ಮಾನ್ಯ ಅಧ್ಯಕ್ಷರೇ, ಪೆಡ್ಡೂಲ್ ಟ್ರೈಬ್ ಪಾರ್ಟ್-೬ ಕರ್ನಾಟಕಕ್ಕೆ ಸಂಬಂಧಪಟ್ಟಂತಹ ಐಟಂ ೨೨ರಲ್ಲಿ ಟೋಕ್ರಿ ಕೋಳಿ, ಕೋಳಿದವರ್ ಕೊಯ್ಗಾ ಕೊಳಚಾ ಎಂಬ ಈ ಹೆಸರುಗಳ ಜಾತಿಗಳು ಮಾತ್ರ ನಮೂದಿಸಲ್ಪಟ್ಟಿವೆ. ನೀವು ಕೇಳಿದ ಕೋಳಿ ಅಂಬಿಗೆಯ ವರ್ಗದ ಜನರು ಈ ೨೨ರ ಲಿಸ್ಟ್‌ನಲ್ಲಿ ಇಲ್ಲ. ಆದುದರಿಂದ ಟೋಕ್ರಿ ಕೋಳಿ, ಕೋಳಿದವರ್ ಜನಾಂಗದವರು ಪರಿಶಿಷ್ಟ ವರ್ಗಕ್ಕೆ ಸೇರಿದವರು ಎಂದು ಈಗಲೂ ಕೂಡ ಬಿಜಾಪುರ ಜಿಲ್ಲೆಯಲ್ಲಿ ಸರ್ಟಿಫಿಕೇಟ್ ಕೊಡುತ್ತಿದ್ದಾರೆ. ಅದಕ್ಕೆ ಆತಂಕವೇನೂ ಇಲ್ಲ.

ಡಾ ಆರ್. ಬಿ. ಚೌಧರಿ — ಸಮಾಜ ಕಲ್ಯಾಣ ಇಲಾಖೆಯವರು ದಿನಾಂಕ ೨೨-೩-೧೯೬೦ರಲ್ಲಿ ಬಿಜಾಪುರದ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶವನ್ನು ಕೊಟ್ಟರೂ ಕೂಡ ಈ ವರ್ಗದವರಿಗೆ ಜಾತಿ ಪ್ರಮಾಣ ಪತ್ರವನ್ನು ಕೊಡುತ್ತಿಲ್ಲ. ಕೆಲವೊಂದು ಅಧಿಕಾರಿಗಳು ಕರ್ನಾಟಕದಲ್ಲಿ ಈ ಜಾತಿಯ ಜನರು ಇರುವುದಿಲ್ಲವೆಂದು ಸಾಧಿಸುತ್ತಿದ್ದಾರೆ. ಅವರ ಸಲುವಾಗಿ ತಾವು ಏನು ಕ್ರಮ ಜರುಗಿಸುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ — ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರತಕ್ಕಂತಹ ಲಿಸ್ಟ್‌ನಲ್ಲಿನ ಕ್ರಮಾಂಕ ೨೨ರಲ್ಲಿ ಕೋಳಿಡೋರ್, ಮತ್ತು ಟೋಕ್ರಿ ಕೋಳಿ ಜನಾಂಗದವರು ಇರುವುದರಿಂದ ಇದಕ್ಕೆ ಸರ್ಟಿಫಿಕೇಟ್ ಅನ್ನು ಯಾರಾದರೂ ಕೊಡದಿದ್ದರೆ ಅದನ್ನು ಕೊಡಬೇಕೆಂದು ನಾವು ಪುನಃ ಸ್ಪಷ್ಟೀಕರಿಸಬಹುದು. ಅದಕ್ಕೂ ತೊಂದರೆಯಿಲ್ಲ. ಆದರೆ ಸಂಬಂಧಪಡದೇ ಇರತಕ್ಕಂತಹವರಿಗೆ ಪ್ರಮಾಣಪತ್ರವನ್ನು ನೀಡಲು ಮಾತ್ರ ಆಗುವುದಿಲ್ಲ. ಆದರೆ ಒಂದು ವೇಳೆ ಸಂಬಂಧಪಟ್ಟವರಿಗೆ ಸರ್ಟಿಫಿಕೇಟ್ ಕೊಡಲು ನಿರಾಕರಿಸಲ್ಪಟ್ಟಿದ್ದರೆ, ಅದನ್ನು ಸರಿಪಡಿಸಲು ನಾವು ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇವೆ.

ಶ್ರೀ ಪಿ. ಜಿ ಆರ್. ಸಿಂಧ್ಯ — ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಮೇಲೆ ಮಾತನಾಡುವಾಗ ಇದರ ಬಗ್ಗೆ ಮಾತನಾಡಬೇಕೆಂದಿದ್ದೆ. ಹೊಸದಾಗಿ ತಹಸೀಲ್ದಾರ್‌ರಾಗಿ ಬಂದಂತಹ ಸಂದರ್ಭದಲ್ಲಿ ಅಥವಾ ಡೆಪ್ಯೂಟಿ ಕಮಿಷನರ್ ಸಮಾಜ ಕಲ್ಯಾಣ ಇಲಾಖೆಯಿಂದ ಕಳಿಸಿತಕ್ಕಂಥ ಗೈಡ್‌ಲೈನ್ಸ್ ಅನ್ನು ಸರಿಯಾಗಿ ಓದಿಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಕೆಲವು ವಿಶಿಷ್ಟವಾದ ವರ್ಗದ ಜನರಿಗೆ ಬಹಳ ತೊಂದರೆಯಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯವರು ಸರ್ಕ್ಯುಲರ್ ಕಳಿಸಿದರೂ ಅವರು ಸಹಕರಿಸುತ್ತಿಲ್ಲ, ಅದಕ್ಕೋಸ್ಕರ ಅವರು ಧರಣಿ ಉಪವಾಸ ಮಾಡುತ್ತಿದ್ದಾರೆ ಎಂಬ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ತಾವು ಜಿಲ್ಲಾಧಿಕಾರಿಗಳ ಸಮ್ಮೇಳನದ ಸಂದರ್ಭದಲ್ಲಾಗಲಿ, ಬೇರೆ ಸಂದರ್ಭದಲ್ಲಾಗಲಿ, ಬೆಳಗಾಂ, ಬಿಜಾಪುರ, ಗುಲ್ಬರ್ಗಾ, ಬೀದರ್ ಈ ೪-೫ ಜಿಲ್ಲೆಗಳಲ್ಲಿ ಇಂಥ ಸಮಸ್ಯೆಗಳು ಇರುವುದರಿಂದ ನಿರ್ದಿಷ್ಟವಾಗಿ, ನಿಖರವಾದ ಸೂಚನೆಯನ್ನು ಸರ್ಕಾರ ಕೊಡುವುದಕ್ಕೆ ಸಾಧ್ಯವೆ ? ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ — ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧಪಕ್ಷದ ಮಾನ್ಯ ಉಪನಾಯಕರು ಕೊಟ್ಟಂಥ ಸೂಚನೆಯನ್ನು ನಾನು ಸ್ವೀಕರಿಸುತ್ತೇನೆ. ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿಚಾರದಲ್ಲಿ ನಮ್ಮ ಅಧಿಕಾರಿಗಳು ಏನಾದರೂ ಅಶಿಷ್ಟ ಧೋರಣೆಯನ್ನು ಅಥವಾ ಔದಾಸೀನ ಭಾವನೆಯನ್ನು ಹೊಂದಿದ್ದಲ್ಲಿ ಬೇಕಾದರೆ ಜಿಲ್ಲಾಧಿಕಾರಿಗಳ ಅಥವಾ ವಿಭಾಗಾಧಿಕಾರಿಗಳ ಸಮ್ಮೇಳನದಲ್ಲಿ ಸ್ಪಷ್ಟಪಡಿಸಬಹುದು. ಯಾರು ಸರ್ಟಿಫಿಕೇಟ್ ಕೊಡುತ್ತಾರೆ ಅಂಥವರಿಗೆ ಸೂಚನೆ ಕೊಡುವುದಕ್ಕೆ ಸಾಧ್ಯವಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

(ಚುಕ್ಕೆ ಪ್ರಶ್ನೆ. ೯೪೧, ೭೭೯, ೯೯೮, ೭೭೭ ೭೭೮ ಮಾನ್ಯ ಸದಸ್ಯರುಗಳು ಗೈರುಹಾಜರು)

ವಿದ್ಯುಚ್ಛಕ್ತಿ (ಕಾರ್ಯನಿರ್ವಾಹಕ) ಅಭಿಯಂತರರ ಕಛೇರಿ ಸ್ಥಾಪಿಸುವ ಬಗ್ಗೆ

*೫೯೨. ಶ್ರೀ ಬಿ. ಹೆಚ್. ಯಂಕಾನಾಯ್ಕ್ (ಹರಪನಹಳ್ಳಿ).— ಮಾನ್ಯ ಕೈಗಾರಿಕಾ, ಇಂಧನ ಮತ್ತು ಪಕ್ಷ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿಯಲ್ಲಿ ಈಗ ಎರಡು ಎಕ್ಸಿಕ್ಯೂಟೀವ್ ಇಂಜಿನಿಯರ್ (ವಿದ್ಯುತ್ ಕಛೇರಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಭಾಗದ ಬಹು ಹಿಂದಿನ ಬೇಡಿಕೆಯಾದ ಎಕ್ಸಿಕ್ಯೂಟೀವ್ ಇಂಜಿನಿಯರ್ ಕಛೇರಿಯನ್ನು ಬಳ್ಳಾರಿಯಿಂದ ಹರಪನಹಳ್ಳಿಗೆ ವರ್ಗಾಯಿಸುವ ಬಗ್ಗೆ ಸರ್ಕಾರಕ್ಕೆ ಅನೇಕ ಸಲ ಪ್ರಶ್ನೆ ಮೂಲಕ ಒತ್ತಾಯಪಡಿಸಿರುವುದು ನಿಜವೆ ?

ಇ) ಹಾಗಿದ್ದಲ್ಲಿ ತಕ್ಷಣ ಹರಪನ ಹಳ್ಳಿಯಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಕಛೇರಿಯನ್ನು ವರ್ಗಾಯಿಸಲು ಸರ್ಕಾರಕ್ಕಿರುವ ತೊಂದರೆಗಳೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಹಾಗೂ ಪಕ್ಷ ಸಚಿವರು).—

ಆ) ಹೌದು. ಬಳ್ಳಾರಿಯಲ್ಲಿ, ಬಳ್ಳಾರಿ–೧ ಮತ್ತು ಬಳ್ಳಾರಿ–೨ ಎನ್ನುವ ಎರಡು ಕಾರ್ಯ ಮತ್ತು ಪಾಲನೆ ವಿಭಾಗಗಳಂ ಕೆಲಸ ನಿರ್ವಹಿಸುತ್ತಿವೆ.

ಆ) ಕೆಲವು ಮನವಿಗಳು ಬಂದಿವೆ.

ಇ) ಬಳ್ಳಾರಿ–೨ ವಿಭಾಗವನ್ನು ಹರಪನಹಳ್ಳಿಗೆ ವರ್ಗಾಯಿಸುವ ವಿಷಯವು ಮಂತ್ರಿಯ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಎಂ. ಯಾಹ್ಯಾ,—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರ ಸಿಕ್ಕದೇ ಇರುವುದರಿಂದ ನಾನೇ ಉತ್ತರವನ್ನು ಹೇಳುತ್ತಿದ್ದೇನೆ. ಬಳ್ಳಾರಿಯಲ್ಲಿ ವಿದ್ಯುಚ್ಛಕ್ತಿ ಮಂಡಲಿಯ ೨ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳ ಕಛೇರಿಗಳು ಇರುವುದರಿಂದ ಅದರಲ್ಲಿ ಒಂದನ್ನು ಹರಪ್ಪನಹಳ್ಳಿಗೆ ವರ್ಗಾಯಿಸಿಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ೨ ಸಬ್ ಡಿವಿಜನ್‌ಗಳು ಬಳ್ಳಾರಿ ಟೌನ್‌ನಲ್ಲೇ ಇವೆ. ಆದರೆ ಇದು ನನಗೂ ಕೂಡ ಸರಿ ಎಂದು ಅನಿಸುವುದಿಲ್ಲ. ಆದ್ದರಿಂದ ಇದರಲ್ಲಿ ೧ ಸಬ್ ಡಿವಿಜನ್‌ನ್ನು ಹರಪ್ಪನಹಳ್ಳಿಗೆ ವರ್ಗಾವಣೆ ಮಾಡಿಕೊಡುವ ವಿಚಾರದಲ್ಲಿ ಏನಾ ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಬಗ್ಗೆ ನಮ್ಮ ಅಧಿಕಾರಿಗಳಿಗೆ ಆದೇಶ ನೀಡುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಕಳೆದ ೧೦ ವರ್ಷಗಳಿಂದಲೂ ಈ ಎರಡೂ ಸಬ್ ಡಿವಿಜನ್‌ಗಳು ಬಳ್ಳಾರಿ ಟೌನ್‌ನಲ್ಲೇ ಇವೆ. ಇದರಲ್ಲಿ ಒಂದನ್ನು ಹರಪನ ಹಳ್ಳಿಗೆ ಬದಲಾಯಿಸಿ ಕೊಡಬೇಕೆಂದು ಹಿಂದಿನ ಸರ್ಕಾರ ಇದ್ದಾಗ ನಾನು ಕೇಳಿದ ಪ್ರಶ್ನೆಗೆ ಇದನ್ನು ಖಂಡಿತವಾಗಿ ವರ್ಗಾಯಿಸಿ ಕೊಡುತ್ತೇವೆ ಎಂದು ಇದೇ ಸದನದಲ್ಲಿ ಆಶ್ವಾಸನೆಯನ್ನು ನೀಡಿದ್ದರು. ಆದರೆ ಇದುವರೆಗೂ ಆ ಕೆಲಸ ಆಗಲಿಲ್ಲ. ಹರಪನ ಹಳ್ಳಿಯಿಂದ ಬಳ್ಳಾರಿಗೆ ಹೋಗಬೇಕಾದರೆ ೧೬೦ ಕಿಲೋ ಮೀಟರ್ ಆಗುತ್ತದೆ. ಹಡಗಲಿ, ಹರಪನಹಳ್ಳಿ ಕೂಡ್ಲಿಗಿ, ಮತ್ತು ಹಗರಿ ಬೊಮ್ಮನಹಳ್ಳಿ ಇಲ್ಲಿ ಬಹಳ ಜನ ರೈತರು ಪಂಪು ಸೆಟ್ಟುಗಳನ್ನು ಇಟ್ಟುಕೊಂಡಿದ್ದಾರೆ. ಇವತ್ತಿಗೂ ವೋಲ್ಟೇಜ್ ಇಲ್ಲ. ಅನೇಕ ರೀತಿಯ ಸಮಸ್ಯೆಗಳು ರೈತರಿಗೆ ಇರುವುದರಿಂದ ಪ್ರತಿಯೊಂದಕ್ಕೂ ಬಳ್ಳಾರಿಗೇ ಬರಬೇಕೆಂದರೆ ಬಹಳ ಕಷ್ಟವಾಗುತ್ತದೆ. ಹರಪನ ಹಳ್ಳಿಗೆ ಈ ಕಛೇರಿಯನ್ನು ವರ್ಗಾವಣೆ ಮಾಡಿದರೆ ಕೂಡ್ಲಿಗಿ, ಹಡಗಲಿ, ಹಗರಿ ಬೊಮ್ಮನಹಳ್ಳಿಯ ಎಲ್ಲರಿಗೂ ಇದು ಕೇಂದ್ರವಾಗುತ್ತದೆ. ಅಲ್ಲಿ ಎಲ್ಲ ಅನುಕೂಲಗಳೂ ಇವೆ, ಕಟ್ಟಡವೂ ಕೂಡ ಇದೆ ಆದರೂ ಈ ಅಧಿಕಾರಿಗಳು ಅಲ್ಲಿಗೆ ಬರಲು ಇಷ್ಟವಿಲ್ಲದೆ ಈ ರೀತಿ ಹಿಂದೇಟು ಹೊಡೆಯುತ್ತಿದ್ದಾರೆ. ಅಲ್ಲಿ ಸಂಮಾರು ೧೪–೧೫ ಕಾಲೇಜುಗಳೂ ಇವೆ. ಆದ್ದರಿಂದ ಎಲ್ಲ ಅನುಕೂಲಗಳೂ ಇರತಕ್ಕ ಹರಪನಹಳ್ಳಿಗೆ ಈ ಎಕ್ಸಿಕ್ಯುಟಿವ್ ಇಂಜಿನಿಯರ್ (ವಿದ್ಯುತ್) ರವರ ಕಛೇರಿಯನ್ನು ವರ್ಗಾವಣೆ ಮಾಡಿಕೊಟ್ಟು ಆ ಭಾಗದ ಎಲ್ಲ ಜನರಿಗೂ ಅನುಕೂಲ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ನನ್ನ ಮನಸ್ಸಿನಲ್ಲೂ ಇದೇ ವಿಚಾರ ಇದೆ. ೨ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳ ಕಛೇರಿ ಬಳ್ಳಾರಿ ಒಂದೇ ಟೌನ್‌ನಲ್ಲಿರುವುದು ಸರಿಕಾಣುವುದಿಲ್ಲ. ಆದ್ದರಿಂದ ಈ ಎರಡರಲ್ಲಿ ಒಂದನ್ನು ಹರಪನಹಳ್ಳಿಗೆ ವರ್ಗಾಯಿಸುವಂಥ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ತಿಳಿಸುತ್ತೇನೆ.

ಶ್ರೀ ಇ. ಟಿ. ಶಂಭುನಾಥ್.—ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಪರಿಶೀಲಿಸುತ್ತೇವೆ ಎಂದು ದಯವಿಟ್ಟು ಹೇಳಬೇಡಿ. ಹಿಂದಿನ ಸರ್ಕಾರದಲ್ಲಿ ಇದಕ್ಕೆ ಸ್ಪಷ್ಟವಾದ ಭರವಸೆ ಸಿಕ್ಕಿದೆ. ಅಲ್ಲಿ ಎಲ್ಲ ಅನುಕೂಲಗಳೂ ಇರುವುದರಿಂದ ದಯವಿಟ್ಟು ಪರಿಶೀಲಿಸುತ್ತೇವೆಂದು ಹೇಳದೆ ಖಂಡಿತವಾಗಿಯೂ ಈ ಕೆಲಸವನ್ನು ಮಾಡಿಕೊಡಲೇಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಯಾವುದೇ ಒಂದು ಆಫೀಸನ್ನು ಶಿಫ್ಟ್ ಮಾಡಬೇಕಾದರೂ ಮೊದಲು ಅಲ್ಲಿ ಅದಕ್ಕೆ ಬೇಕಾದ ಕಟ್ಟಡ ಇರಬೇಕು, ಹಾಗೂ ಇನ್ನಿತರೇ ಸೌಲಭ್ಯಗಳಿದ್ದರೆ ಮಾತ್ರ ಶಿಫ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾನು ಈಗಾಗಲೇ ಉತ್ತರವನ್ನು ಹೇಳಿರುವುದರಿಂದ ತಾವು ತೃಪ್ತರಾಗಿದ್ದೀರೆಂದು ಅಂದುಕೊಂಡಿದ್ದೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೆ, ಅಲ್ಲಿ ಕಟ್ಟಡ ಇದೆ. ಎಲ್ಲ ಅನುಕೂಲಗಳು ಇವೆ. ಅಧಿಕಾರಿಗಳ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಯಾವ ತೊಂದರೆಯೂ ಇಲ್ಲ. ಅದೂ ಅಲ್ಲದೆ ನಂ. ೨ ಡಿವಿಜನ್ ಪ್ಯೂರ್ಲಿ ಹಡಗಲಿ, ಹರಪನಹಳ್ಳಿ ಮತ್ತು ಹಗರಿ ಬೊಮ್ಮನಹಳ್ಳಿ ತಾಲ್ಲೂಕಿಗೆ ಸೇರಿದ್ದು. ನೀವು ಆ ಡಿವಿಜನ್‌ನನ್ನು ಅಲ್ಲಿಗೆ ಶಿಫ್ಟ್ ಮಾಡುವುದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಆದರೆ ಈ ಅಧಿಕಾರಿಗಳು ಹಳ್ಳಿಗೆ ಬರುವುದಕ್ಕೆ ಇಷ್ಟವಿಲ್ಲದೇ ಇರುವುದರಿಂದ ಈ ರೀತಿ ಮಾಡುತ್ತಿದ್ದಾರೆ ಅಲ್ಲಿ ಎಲ್ಲ ಸೌಕರ್ಯಗಳೂ ಇವೆ. ದಯವಿಟ್ಟು ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಎಸ್. ಎಂ. ಯಾಹ್ಯಾ.—ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ.

ಅಧ್ಯಕ್ಷರು:—ಶ್ರೀಯುತ ಪುಟ್ಟುರವರೆ, ತಮ್ಮ ೨೮೪ (೪೮೮) ಪ್ರಶ್ನೆಯನ್ನು ಮುಂದಿನವಾರ ತೆಗೆದುಕೊಳ್ಳುತ್ತೇವೆ.

ರೇಷ್ಮೆ ಮೊಟ್ಟೆ ವಿತರಣೆ ಬಗ್ಗೆ

೨೯೬. ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೈತರಿಗೆ ರೇಷ್ಮೆ ಬಿತ್ತನೆ ಮೊಟ್ಟೆ ಸಿಕ್ಕದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಉತ್ತಮ ತಳಿ ಮೊಟ್ಟೆಗಳನ್ನು ರೈತರಿಗೆ ಕಾಲಕ್ಕೆ ಸರಿಯಾಗಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವ ಏರ್ಪಾಡನ್ನು ಮಾಡಿದೆಯೆ ?

ಇ) ಕಾಳಸಂತೆಯಲ್ಲಿ ರೇಷ್ಮೆ ಗೂಡುಗಳನ್ನು ಮಾರುವ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ಇಲ್ಲ.

ಆ) ಮಾಡಿದೆ.

ಇ) ರೇಷ್ಮೆ ಕಾಯಿದೆ ಜಾರಿ ವಿಭಾಗದ ಅಧಿಕಾರಿಗಳು ಹಾಗೂ ಇಲಾಖೆಯ ಸಹಾಯಕ ನಿರ್ದೇಶಕರು ಕಾಳಸಂತೆಯಲ್ಲಿ ರೇಷ್ಮೆ ಬಿತ್ತನೆ ಗೂಡುಗಳು ಮಾರಾಟ ಮಾಡದ ರೀತಿ ಕ್ರಮ ಕೈಗೊಂಡಿದ್ದಾರೆ. ಮೈಸೂರು ಬಿತ್ತನೆ ವಲಯದಲ್ಲಿ ೮ ತಾಂತ್ರಿಕ ಸೇವಾ ಕೇಂದ್ರಗಳು ಮತ್ತು ೬೯ ವಲಯಗಳಿವೆ. ಪ್ರತಿ ಬಿತ್ತನೆ ಬೆಳೆಗಾರನಿಗೂ ರಹದಾರಿ ನೀಡಿ ಪಾಸ್ ಪುಸ್ತಕಗಳನ್ನು ಕೊಡಲಾಗಿದೆ. ಪ್ರತಿ ಬೆಳೆ ಇರುವ ಅವಧಿಯಲ್ಲಿ ವಿಸ್ತರಣಾಧಿಕಾರಿಗಳು ಹಾಗೂ ವಲಯಾಧಿಕಾರಿಗಳು ಬೆಳೆಯನ್ನು ವೀಕ್ಷಿಸಿ ಬೆಳೆಯ ಬಗ್ಗೆ ಟಿಪ್ಪಣಿಯನ್ನು ಪಾಸ್ ಪುಸ್ತಕದಲ್ಲಿ ಬರೆಯುತ್ತಾರೆ. ಬಿತ್ತನೆ ರೈತರಿಗೆ ರೇಷ್ಮೆ ಮೊಟ್ಟೆಗಳನ್ನು ತಾಂತ್ರಿಕ ಸೇವಾ ಕೇಂದ್ರ ಅಧಿಕಾರಿಗಳು/ವಲಯಾಧಿಕಾರಿಗಳ ಮೂಲಕ ಮಾತ್ರ ಹಂಚಲಾಗುತ್ತದೆ. ಹುಳುಸಾಕಾಣಿಗೆ ಮೊದಲು ಮತ್ತು ಬೆಳೆಯ ನಂತರ ಹುಳು ಸಾಕಾಣಿಕೆ ಮನೆಯನ್ನು ಇಲಾಖೆಯವರೇ ಶುದ್ಧೀಕರಿಸುತ್ತಾರೆ ಇದಲ್ಲದೆ ಬಿತ್ತನೆ ಗೂಡಿನ ವಿಲೇವಾರಿಯ ಬಗ್ಗೆ ಇಲಾಖಾ ಅಧಿಕಾರಿಗಳೇ ಉಸ್ತುವಾರಿ ವಹಿಸುವುದರಿಂದ ಕಾಳಸಂತೆಯಲ್ಲಿ ರೇಷ್ಮೆ ಬಿತ್ತನೆ ಗೂಡುಗಳ ಮಾರಾಟ ನಡೆಯುತಕ್ಕಂತ ಪ್ರಸಂಗಗಳು ಸಾಮಾನ್ಯವಾಗಿ ಬರುವುದಿಲ್ಲ.

Sri K. LAKKAPPA.—Sir, there are three points involved in this question. Time and again, we are requesting particularly from the Sericulture districts that good quality seeds be supplied to the farmers, but they are not available and in some places even sub-standard seeds are being sold in the markets. Therefore, I would urge upon the Government to take steps to ensure supply of quality seeds and also supply them well in time to the farmers because many a time it is not supplied at the proper time. Secondly, I would like to know from the Hon'ble